ಅಧ್ಯಕ್ಷರು:- ಬರೀ ಗೌರವವನ್ನು ಇಟ್ಟುಕೊಂಡರೆ ಸಾಲದು ಅವರಿಗೆ . . .

ಶ್ರೀ ಸಿದ್ಧರಾಮಯ್ಯ:- ಆ ಸೂಚನೆಯನ್ನು ಕೊಡುತ್ತೇನೆ.

ವರದಿಗಳನ್ನೊಪ್ಪಿಸುವುದು

ಶ್ರೀ ಯು.ಆರ್.ಸಭಾಪತಿ(ಸದಸ್ಯರು, ಇಂಧನ ಇಲಾಖಾ ವಿಷಯ ಸ ಮಿತಿ):- ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಅಧ್ಯಕ್ಷರು, ಇಂಧನ ಇಲಾಖಾ ವಿಷಯ ಸಮಿತಿ, ಇವರ ಪರವಾಗಿ:- ಮಾನ್ಯ ಅಧ್ಯಕ್ಷರೆ, ನಾನು ಇಂಧನ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ (ಅಧ್ಯಕ್ಷರು, ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ವಿಷಯ ಸ ಮಿತಿ):- ಮಾನ್ಯ ಅಧ್ಯಕ್ಷರೆ, ನಾನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ (ಅಧ್ಯಕ್ಷರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ವಿ.ಎಸ್.ಕರ್ಜಗಿ (ಅಧ್ಯಕ್ಷರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಹೆಚ್.ಬಿ.ದ್ಯಾವರಪ್ಪ (ಅಧ್ಯಕ್ಷರು, ಒಳಾಡಳಿತ, ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಒಳಾಡಳಿತ ,ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರಧಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಈ. ಮಾರುತಿರಾವ್ ಪವಾರ್ (ಸದಸ್ಯರು, ಆಹಾರ ಮತ್ತು ನಿತ್ಯೋಪಯೋಗಿ ವಸ್ತುಗಳ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಆಹಾರ ಮತ್ತು ನಿತ್ಯೋಪಯೋಗಿ ವಸ್ತುಗಳ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಸದಸ್ಯರು, ಶಿಕ್ಷಣ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:- ಶ್ರೀ ಹೆಚ್.ಎನ್.ಪ್ರಕಾಶ್ (ಸದಸ್ಯರು, ಕಂದಾಯ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖಾ ವಿಷಯ ಸಮಿತಿ, ಇವರ ಪರವಾಗಿ):- ಕಂದಾಯ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ಹಾಗೂ

ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಡಾ: ಎ.ಬಿ. ಮಲಕರೆಡ್ಡಿ (ಸದಸ್ಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 1996-97 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:- ಎಲ್ಲಾ ವರದಿಗಳೂ ಸಭೆಯಲ್ಲಿ ಮಂಡಿಸಲ್ಪಟ್ಟವು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಪಶುಸಂಗೋಪನಾ ಇಲಾಖೆಯ ಕಾವಲುಗಾರರು ಮತ್ತು ಷೇರ್ವೆಗಾರರು ಕಾವಲು ಭೂಮಿಯ ಉಳುಮೆ ಮಾಡುತ್ತಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 18(338)

ಶ್ರೀ ಬಿ. ಶಿವರಾಮು (ಗಂಡಸೀ)

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರುಸುವರೇ

ಅ) ಪಶುಪಾಲನೆ ಇಲಾಖೆಯ ಕಾವಲುಗಾರರು ಮತ್ತು ಷೇರ್ವೆಗಾರರು ಬಹಳ ದಿವಸದಿಂದ ನಿರಂತರವಾಗಿ ಕಾವಲು ಭೂಮಿಯ ಉಳಿಮೆ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?:- ಕಾವಲುಗಾರರು ಕಾವಲು ಭೂಮಿಯನ್ನು ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಂದಿದ್ದರೆ ಒಟ್ಟು ಎಷ್ಟು ಮಂದಿ ಉಳುಮೆ ಮಾಡುತ್ತಿದ್ದಾರೆ, ಮತ್ತು ಅದರ ವಿಸ್ತೀರ್ಣವೆಷ್ಟು ? :- 1. 136 ಕಾವಲುಗಾರರು ಉಳಿಮೆ ಮಾಡುತ್ತಿರುತ್ತಾರೆ.

2. ವಿಸ್ತೀರ್ಣ 680 ಎಕರೆ

ಇ) ಉಳಿಮೆ ಮಾಡುತ್ತಿರುವ ಭೂಮಿಯನ್ನು ಕಾವಲುಗಾರರು ಮತ್ತು ಷೇರ್ವೆಗಾರರಿಗೆ ಮಂಜೂರಾತಿ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ ? :- ಅವಕಾಶವಿರುವುದಿಲ್ಲ.

ಈ) ಇಲ್ಲದಿದ್ದರೆ ಕಾನೂನಿಗೆ ತಿದ್ದುಪಡಿ ತಂದು ಅರ್ಹತೆಯ ಆಧಾರದ ಮೇಲೆ ಮಂಜೂರಾತಿ ಮಾಡಲು ಸರ್ಕಾರದವರು ಪರಿಶೀಲಿಸುವರೆ ? :- ಇಲ್ಲ

ಉ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ? :- ಕಾವಲುಗಾರರಿಗೆ ಕಾವಲು ಮಾಡಲು ಪ್ರೋತ್ಸಾಹವಾಗಿ ಒಬ್ಬ ಕಾವಲುಗಾರನಿಗೆ 20 ಎಕರೆಯನ್ನು ಅಮೃತ್ ಮಹಲ್ ಕಾವಲ್‌ನ ದನಗಳನ್ನು ಮೇಯಿಸಲು ಹಾಗೂ 5 ಎಕರೆಯನ್ನು ಸ್ವಂತ ಬೇಸಾಯಕ್ಕಾಗಿ ನೀಡಲಾಗುತ್ತಿದ್ದು, ಕಾವಲುಗಾರನಾಗಿ ಮುಂದುವರೆಯುವವರೆಗೆ ಮಾತ್ರ ಈ ಸೌಲಭ್ಯ ಇರುತ್ತದೆ. ಕಾವಲುಗಾರರು ಇಲಾಖೆಯ ಖಾಯಂ ನೌಕರರಲ್ಲ. ಆದ್ದುರಿಂದ, ಖಾಯಂ ಆಗಿ (ಸಾಮಾಜಿಕ ಹುಲ್ಲುಗಾವಲು' ಸದರಿ ಜಮೀನನ್ನು ನಿಯಮಾನುಸಾರ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಬಿ.ಬಿ.ನಿಂಗಯ್ಯ

(ಪಶು ಸಂಗೋಪನಾ ರಾಜ್ಯ ಸಚಿವರು)